



ನನ್ನ ಕೋಣೆಗೇ ಬಂದು ಮಾತನಾಡುವುದಿದೆ ಎಂದು ಹೇಳಿದ್ದ. ಯಾಕಿರಬಹುದು?

ಮಾತನಾಡುವಾಗ ಅವನು ಏನು ಹೇಳುತ್ತಿದ್ದಾನೆ ಎನ್ನುವುದಕ್ಕಿಂತ ಅವನ ಮಾತಿನ ಸಾಲುಗಳ ನಡುವಿನ ಅರ್ಥ ಏನೆಂದು ಮಿದುಳು ಅಂದಾಜು ಮಾಡುತ್ತಿರಬೇಕು. ಇಲ್ಲವಾದಲ್ಲಿ ನಾವು ಕೊಡುವ ಉತ್ತರಗಳು ಅವನ ಪರೋಕ್ಷ ಪ್ರಶ್ನೆಗಳಿಗೆ ತಾಳೆಯಾಗುತ್ತಿರಲಿಲ್ಲ. ಅವನು ನಮ್ಮನ್ನು ಅವಿರತ ಅಳೆಯುತ್ತಿರುತ್ತಾನೆ. ಅಂತಹದ್ದೇ ಧೋರಣೆಯನ್ನು ನಮ್ಮಿಂದ ಬಯಸುತ್ತಾನೆ. ಇಲ್ಲದಿದ್ದರೆ ನಾವವನಿಗೆ ಸಮನಲ್ಲ ಎಂದು ಒಂದೇ ಬಾರಿಗೆ ನಿರ್ಧರಿಸಿಬಿಡುತ್ತಾನೆ. ಅದಕ್ಕೇ ಅವನ ಜತೆ ಮಾತನಾಡುವುದು ಸಹಜವಾದ ಅನುಭವ ಅಂತ ಅನ್ನಿಸುತ್ತಿರಲಿಲ್ಲ.

"ಸುಳ್ಳು ಹೇಳುವುದಾದರೆ ನಾಲಿಗೆ ಪೂರ ಉಪಯೋಗಿಸಿ ಹೇಳಬೇಕು'' ಅಂತ ಅವನು ಮ್ಯಾನೇಜರನೊಬ್ಬನಿಗೆ ಉಪದೇಶಿಸುವಾಗ ನಾನು ಕೇಳಿಸಿಕೊಂಡಿದ್ದೆ. ಸುಳ್ಳುಗಳನ್ನು ನಿಜದ ತಲೆಯ ಮೇಲೆ ಹೊಡೆದಂತೆ ಭಾವನಾತ್ಮಕವಾಗಿ, ಸುಲಲಿತವಾಗಿ ಪ್ರಯತ್ನವೇ ಇಲ್ಲದ ಸರಳತೆಯಲ್ಲಿ ಹೇಗೆ ಹೇಳಬಹುದೆಂದು ಅವನಿಂದ ಕಲಿಯಬಹುದಿತ್ತು.

ಅವನು ನಮ್ಮ ಭೇಟಿಗೆ ಆಗಾಗ ಬರುತ್ತಿದ್ದ. ಹಾಗೆ ಬಂದಾಗಲೆಲ್ಲ ಇನ್ನಷ್ಟು, ಮತ್ತಷ್ಟು ದುಡಿಯಿರಿ ಎಂದು ಹೇಳುವುದೇ ಆತನ ಕಸುಬಾಗಿಹೋಗಿತ್ತು. ಅದನ್ನು ಸಾಧಿಸಲು ಇರುವ ಹಲವು ಗೋಪ್ಯ ಮಾರ್ಗಗಳನ್ನು ಕೂಡ ಅತ್ಯಂತ ನವಿರಾದ ಪದಗಳಲ್ಲಿ ಹೇಳಿಯೂ ಹೇಳದವನಂತೆ ತಿಳಿಸಿಕೊಡುತ್ತಿದ್ದ. ಗುಂಪಿನಲ್ಲಿ ಗೋವಿಂದ ಅಂತ ಅವನನ್ನು ಭೇಟಿಯಾಗುತ್ತಿದ್ದ ನಾನು ಅವನಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿರಲಿಲ್ಲ. ಹಾಗಂತ ಅವನನ್ನು ನಿರ್ಲಕ್ಷಿಸಬೇಕು ಅಂತಲ್ಲ. ನನ್ನದೇನನ್ನೂ ಮುಚ್ಚಿಡಬೇಕಾದ ಅವಶ್ಯಕತೆ